ದುರದೃಷ್ಟವಶಾತ್ ವರ್ಣಭೇದ ನೀತಿ ಎಲ್ಲೆಡೆ ವ್ಯಾಪಿಸಿದೆ. ಅದು ವಿಶ್ವವಿದ್ಯಾಲಯದ ಬಾಗಿಲಲ್ಲಿ ನಿಲ್ಲುವುದಿಲ್ಲ ಅಥವಾ ಬ್ಯಾಲೆ ವೇದಿಕೆಗಷ್ಟೇ ಸೀಮಿತವಾಗುವುದಿಲ್ಲ. ಕಪ್ಪುಜನಾಂಗದ ಅತ್ಯುತ್ತಮ ನೃತ್ಯಪಟುಗಳು ನನಗೆ ಗೊತ್ತು. ಅವರಲ್ಲಿ ಗಂಡಸರೂ ಹೆಂಗಸರೂ ಇದ್ದಾರೆ. ಅವರಿಗೆ ಬ್ಯಾಲೆಗೆ ಸೂಕ್ತವಾದ ಮೈಕಟ್ಟು ನಿಮ್ಮಲ್ಲಿಲ್ಲ ಎಂದು ಹೇಳಲಾಗಿತ್ತಂತೆ. ಇಂದು ಕೆಲವೇ ಮಂದಿ ಕಪ್ಪುಜನಾಂಗದ ಬ್ಯಾಲೆ ನೃತ್ಯಪಟುಗಳು ಕಾಣಸಿಗುತ್ತಾರೆ. ದುರದೃಷ್ಟವಶಾತ್ ರಂಗಭೂಮಿ, ಸಿನಿಮಾದಲ್ಲೂ ವರ್ಣಭೇದ, ಲಿಂಗಭೇದವಿದೆ. ಹಾಲಿವುಡ್‌ನಲ್ಲಿ ನಾನೇ ಮೊದಲ ಮಹಿಳಾ ನಿರ್ದೇಶಕಿ. ನಿರ್ದೇಶನ ಮಾಡಲೆಂದೇ ಸ್ವೀಡನ್‌ಗೆ ಹೋಗಿ ಸಿನಿಮಾಟೋಗ್ರಫಿ ಕಲಿತೆ. ಕ್ಯಾಮೆರ ಹೇಗೆ ಕೆಲಸ ಮಾಡುತ್ತದೆ ಎಂದು ತಿಳಿಯಲು ಈ ಕೋರ್ಸ್ ಮಾಡಿದೆ. ಚಿತ್ರಕಥೆ ಬರೆದು, ಸಂಗೀತ ನಿರ್ದೇಶಿಸಿದ್ದರೂ ಚಿತ್ರ ನಿರ್ದೇಶಿಸುವ ಅವಕಾಶ ನೀಡಲಿಲ್ಲ. ನಿರ್ದೇಶನಕ್ಕಾಗಿ ಸ್ವೀಡನ್‌ನ ಯುವ ನಿರ್ದೇಶಕರನ್ನು ಕರೆತಂದರು. ಅವರು ಹಿಂದೆಂದೂ ಕಪ್ಪು ವ್ಯಕ್ತಿಯ ಕೈ ಕೂಡ ಕುಲುಕಿರಲಿಲ್ಲ. ಅದು ಡಯಾನಾ ಸ್ಯಾಂಡ್ಸ್ ಜೊತೆ ಮಾಡಿದ ಜಾರ್ಜಿಯಾ ಸಿನಿಮಾ. ಕೆಲವರು ಆ ಸಿನಿಮಾವನ್ನು ಹೊಗಳಿದರು, ಕೆಲವರು ತೆಗಳಿದರು. ಎರಡೂ ಅಭಿಪ್ರಾಯಗಳು ಸಲ್ಲಬೇಕಾದದ್ದು ನನಗಲ್ಲ. ನನಗೆ ಆ ಚಿತ್ರವನ್ನು ನಿರ್ದೇಶಿಸುವ ಅವಕಾಶ ಸಿಕ್ಕಿದ್ದರೆ ಅದನ್ನು ಬೇರೆಯ ರೀತಿಯಲ್ಲಿ ತೆಗೆಯುತ್ತಿದ್ದೆ. ಆಗ ಅಂದುಕೊಂಡೆ, ಇನ್ನುಮುಂದೆ ಇಂಥದ್ದಕ್ಕೆಲ್ಲ ಹತ್ತುಪಟ್ಟು ಹೆಚ್ಚಿಗೆ ಸಿದ್ಧವಾಗಿರುತ್ತೇನೆ. ಇದೇನು ಹೊಸದಲ್ಲ. ಪ್ರತಿ ವಿಷಯದಲ್ಲಿ ಇಂಥದ್ದನ್ನು ಎದುರಿಸಲು ತುಸುಹೆಚ್ಚಿಗೆ ತಯಾರಾಗಿರಬೇಕು ಅಂತ ಗೊತ್ತು.

◆ **ಲೇಖಕಿಯಾಗಿಯೂ...**

ಹೌದು.

◆ **ಸಂಪಾದಕನ ಮೇಜಿಗೆ ಬರುವುದು ಹಸ್ತಪ್ರತಿಯೇ ಹೊರತು ಯಾವುದೇ ವ್ಯಕ್ತಿಯಲ್ಲವಲ್ಲ.**

ಹೌದು. ನನ್ನ ಸಲಕರಣೆ ಅಂದರೆ ಭಾಷೆಯ ಬಗ್ಗೆ ಸಂಪೂರ್ಣ ಹತೋಟಿಯಿರಬೇಕು. ನನ್ನ ಬರವಣಿಗೆ ಎಷ್ಟು ನಯವಾಗಿ ಚಂದವಾಗಿರಬೇಕೆಂದರೆ ಅದನ್ನು ಉಜ್ಜಿ ಚಂದ ಮಾಡಿದ್ದೇನೆ ಅನ್ನಿಸಬಾರದು. ನನ್ನ ಓದುಗರು, ಅದರಲ್ಲೂ ಸಂಪಾದಕ ಕನಿಷ್ಠ ಅರ್ಧಗಂಟೆಯವರೆಗಾದರೂ ನನ್ನ ಪುಸ್ತಕದಲ್ಲಿ ತಲ್ಲೀನನಾಗಬೇಕು. ತಾನು ಓದುತ್ತಿದ್ದೇನೆ ಎನ್ನುವುದನ್ನು ಅವನು ಮರೆತುಬಿಡುವಷ್ಟು ತಲ್ಲೀನನಾಗಬೇಕು.

◆ **ಇದು ಬರೆಯಲು ಕೂತ ಪ್ರತಿ ವ್ಯಕ್ತಿಯ ಗುರಿಯಲ್ಲವೇ?**

ನಿಸ್ಸಂಶಯವಾಗಿ. ಲೇಖಕ ಭ್ರಮೆಗೆ ಬಿದ್ದು ತಾನೇ ಸ್ವಲ್ಪ ಮೈಮರೆಯುವ ಸಾಧ್ಯತೆ ಇದೆ ಇದರಲ್ಲಿ. ಆದರೆ, ನನ್ನ ಪ್ರಕಾರ ಅದೇನೂ ತೀರ ಅಪಾಯಕಾರಿಯಲ್ಲ. ಇದು ಅವನನ್ನು ಸಾಧಿಸಬೇಕೆಂಬ ತೀವ್ರತೆಯಲ್ಲಿ ಸದಾ ಒಂಟಿಗಾಲಲ್ಲಿ ನಿಲ್ಲುವಂತೆಯೂ ಮಾಡುತ್ತದೆ.

◆ **ಈ ಐದು ಆತ್ಮಚರಿತ್ರೆಗಳನ್ನು ಪೋಣಿಸಿದ ಸಾಮಾನ್ಯ ಎಳೆ ಯಾವುದಾದರೂ ಇದೆಯಾ?**

**ನನಗೆ ಎಲ್ಲದರಲ್ಲೂ ಮಗುವಿನ ಬಗೆಗಿನ ಪ್ರೀತಿ ಆ ಎಳೆ ಅನ್ನಿಸಿದೆ.**

ಹೌದು. ನನಗೂ ಹಾಗೆ ಅನ್ನಿಸಿದೆ. ಮತ್ತೊಬ್ಬರಿಗೂ ಹಾಗೆ ಅನ್ನಿಸಿದೆ ಅಂದರೆ ನಾನು ಅದೃಷ್ಟವಂತೆ ಎಂದೇ ಹೇಳಬೇಕು. ನನ್ನ ಹೇಳಿಕೆ, ನನ್ನ ಸಿದ್ಧಾಂತ ನನ್ನ ಕೃತಿಯಲ್ಲಿದೆ. ನಮಗೆ ಸೋಲುಗಳು ಎದುರಾಗಬಹುದು. ನಾವು ಎದೆಗುಂದಬಾರದು. ಹೇಳುವುದು ಸುಲಭ ಅನ್ನಿಸಬಹುದು.